# ಕರ್ನಾಟಕ ಸರ್ಕಾರ

ಗ್ರಾಅಪ:108:ಅಂ.ಅ.ಸ2011

ಕರ್ನಾಟಕ ಸರ್ಕಾರದ ಸಚಿವಾಲಯ
-- ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:25/07/2012

ಇಂದ,

ಸರ್ಕಾರದ ಪ್ರಧಾನಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
ಬೆಂಗಳೂರು

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
----------- ಜಿಲ್ಲಾ ಪಂಚಾಯತ್

ಮಾನ್ಯರೆ,

ವಿಷಯ: ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ), 'ಬಿ' ಗುಂಪಿನ ಹುದ್ದೆಗಳಿಗೆ ಮಾನವ ಸಂಪನ್ಮೂಲ ನಿರ್ವಹಣಾ ಪದ್ಧತಿಯ ಮುಖಾಂತರ ವೇತನ ನೀಡುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಪತ್ರ ಸಂ:ಸಿಆಸುಇ 25 ಇಜಿವಿ 2006, ದಿನಾಂಕ:2/08/2007
2) ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಸಂಘ(ರಿ) ರವರ ಪತ್ರ ಸಂ: 9/2012-13, ದಿನಾಂಕ:11/07/2012
3) ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಸಂಘ(ರಿ) ರವರ ಪತ್ರ ಸಂ:12/ 2012-13, ದಿನಾಂಕ:16/07/2012

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತಗಳತ್ತಾ ಗಮನಸೆಳೆಯುತ್ತಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಮುಂಬಡ್ತಿ ಮುಖಾಂತರ 'ಬಿ' ಗುಂಪು ಹುದ್ದೆಗಳಾದ 176 ಸಹಾಯಕ ನಿರ್ದೇಶಕರಿಗೆ ಪ್ರತಿ ತಾಲೂಕಿಗೆ ಒಬ್ಬರಂತೆ ದಿನಾಂಕ:30/12/2011ರಂದು

ಸ್ಥಾನಪನ್ನ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಇವರಲ್ಲಿ ಕೆಲವರಿಗೆ, ಕೆಲವು ಜಿಲ್ಲೆಗಳಲ್ಲಿ ಲೆಕ್ಕಶೀರ್ಷಿಕೆ 2515-00-101-0-08 ಯೋಜನೇತರ ಅಡಿಯಲ್ಲಿ ಹಾಗೂ ಇನ್ನು ಕೆಲವರಿಗೆ, ಕೆಲವು ಜಿಲ್ಲೆಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಆಡಳಿತ ವೆಚ್ಚದಲ್ಲಿ ಚೆಕ್ ಮುಖಾಂತರ ಡ್ರಾ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಉಲ್ಲೇಖ(3) ರನ್ವಯ ತಿಳಿಸಿರುತ್ತಾರೆ.

ಈ ಬಗ್ಗೆ ಸದರಿ ನೌಕರರ ವೇತನದಿಂದ ಕಟಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಚೆಕ್ಕುಗಳನ್ನು ನೀಡಿ ಸಂಬಂಧಿಸಿದ ಕಟಾಯಿಸಿದ ವಿವಿಧ ಖಾತೆಗಳಿಗೆ ಜಮಾ ಆಗಿದೆಯೇ ಅಥವಾ ಇಲ್ಲವೇ ಎಂದು ಸದರಿ ನೌಕರರಿಗೆ ತಿಳಿದು ಬರುತ್ತಿಲ್ಲವಾದ್ದರಿಂದ, ಇವರುಗಳು ನಿವೃತ್ತಿಯಾಗುವ ಸಮಯದಲ್ಲಿ ಕಟಾಯಿಸಿದ ಚೆಕ್ ಮೊತ್ತಗಳು ಸಂಬಂಧಿಸಿದ ಖಾತೆಗಳಿಗೆ ಜಮಾ ಆಗದೆ ನಿವೃತ್ತಿ ಸೌಲಭ್ಯಗಳನ್ನು ಪಡೆಯುವಲ್ಲಿ ವಿಳಂಬವಾಗುತ್ತಿದೆಯೆಂದು ಸರ್ಕಾರಕ್ಕೆ ಮನವಿ ಮಾಡಿರುತ್ತಾರೆ.

ಆದಕಾರಣ ಈ ಎಲ್ಲಾ 176 ಸಹಾಯಕ ನಿರ್ದೇಶಕರುಗಳ ಹುದ್ದೆಗಳನ್ನು **HRMS** ನಲ್ಲಿ ಈಗಾಗಲೇ ಸೃಜಿಸಲಾಗಿರುವುದರಿಂದ, ಇನ್ನು ಮುಂದೆ ಇವರುಗಳ ವೇತನವನ್ನು ಲೆಕ್ಕಶೀರ್ಷಿಕೆ 2515-00-101-0-08 (ಯೋಜನೇತರ) ರಡಿಯಲ್ಲಿ **HRMS** ಮುಖಾಂತರ ಮಾಸಿಕ ವೇತನವನ್ನು ನೀಡಲು ಕೂಡಲೇ ಅಗತ್ಯ ಕ್ರಮ ಕೈಗೊಂಡು, ಸರ್ಕಾರಕ್ಕೆ ವರದಿ ನೀಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ

(ಬಿ.ಕೆ.ಶ್ರೀನಿವಾಸ್‌ಮೂರ್ತಿ)
ಆಂತರಿಕ ಆರ್ಥಿಕ ಸಲಹೆಗಾರರು ಮತ್ತು
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ:

1) ಎಲ್ಲಾ ಮುಖ್ಯಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್
2) ಅಧ್ಯಕ್ಷರು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಸಂಘ(ರಿ), ಜಿ-09,ಕೃಷ್ಣಾಟವರ್, 3ನೇಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-09